KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ
"NAAC Accredited with "A" Grade 2022"

Pavate Nagar, Dharwad
ಪಾವಟೆನಗರ, ಧಾರವಾಡ

Fax No. 0837-2741928
Tel Ph No. 0836-2215267
Website : www.kud.ac.in

ನಂ. ಕವಿವಿ/ಪರೀಕ್ಷಾ/ಜಿಎಡಿ/2023/ 1189 ದಿನಾಂಕ: 08/12/2023

## ಅಧಿಸೂಚನೆ

ವಿಷಯ:-ಜನೇವರಿ/ಫೆಬ್ರುವರಿ-2024ರಲ್ಲಿ ಕೊನೆಯ ಸುವರ್ಣಾವಕಾಶದಡಿಯಲ್ಲಿ (One Time Measure) ಜರುಗುವ ಸ್ನಾತಕ ಪದವಿಯ 1, 3 ಮತ್ತು 5 ನೇ ಸೆಮಿಸ್ಟರ್‌ನಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪರೀಕ್ಷಾ ಫಾರ್ಮ/ಶುಲ್ಕ ತುಂಬುವ ಕುರಿತು.

ಉಲ್ಲೇಖ:-1) ಸಿಂಡಿಕೇಟ ಠರಾವು ಸಂಖ್ಯೆ 15 ದಿನಾಂಕ:28/07/2023.
2) ಮಾನ್ಯ ಕುಲಪತಿಗಳ ಆದೇಶ ದಿನಾಂಕ:08/12/2023.

ಕ.ವಿ.ವಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೆನೆಂದರೆ, ಎಲ್ಲ ಸ್ನಾತಕ ಪದವಿಯ 1, 3 ಮತ್ತು 5 ನೇ ಸೆಮಿಸ್ಟರ್ ಕೋರ್ಸುಗಳಲ್ಲಿ ನಿಗದಿತ ದ್ವಿ-ಅವಧಿಯೊಳಗಾಗಿ (Double the Duration of the Course) ನಿಗದಿಪಡಿಸಿದ ಅವಧಿಯೊಳಗಾಗಿ ಪದವಿ ಪೂರ್ಣಗೊಳಿಸದೆ ಇದ್ದಂತಹ ವಿದ್ಯಾರ್ಥಿಗಳಿಗೆ ಒಂದು ಬಾರಿ ಸುವರ್ಣಾವಕಾಶದಡಿಯಲ್ಲಿ (OTM) ಅವಕಾಶ ನೀಡಲಾಗಿದೆ. (ಮೇಜರ್/ಮೈನರ ವಿಷಯಗಳನ್ನು ಹೊರತುಪಡಿಸಿ) ಅಂತಹ ವಿದ್ಯಾರ್ಥಿಗಳಿಗೆ ಜನೇವರಿ/ಫೆಬ್ರುವರಿ 2024 ರಲ್ಲಿ ಲಿಖಿತ ಪರೀಕ್ಷೆಗಳನ್ನು ಜರುಗಿಸಲಾಗುವುದು. ಸದರ ಪರೀಕ್ಷೆಗಳ ವಿವರವಾದ ವೇಳಾಪಟ್ಟಿಯನ್ನು ಕ.ವಿ.ವಿ.ಅಂತರಜಾಲದಲ್ಲಿ **(www.kud.ac.in (Notification))** ನಂತರ ಪ್ರಕಟಿಸಲಾಗುವುದು.

1) **ದಿನಾಂಕ:08/12/2023** ರಿಂದ ವಿದ್ಯಾರ್ಥಿಗಳು ಪರೀಕ್ಷಾ ಫಾರ್ಮನ್ನು ಮಹಾವಿದ್ಯಾಲಯದಿಂದ ಅಥವಾ ಕವಿವಿ ಅಂತರ್ಜಾಲದ ಮೂಲಕ (www.kud.ac.in Notification) ಪಡೆದುಕೊಂಡು, SBI Online Portal ಮೂಲಕ ಪರೀಕ್ಷಾ ಶುಲ್ಕ ಭರಿಸಿ ಮಹಾವಿದ್ಯಾಲಯಕ್ಕೆ ದಂಡವಿಲ್ಲದೆ ಪರೀಕ್ಷಾ ಫಾರ್ಮ ಸಲ್ಲಿಸಲು ಕೊನೆಯ **ದಿನಾಂಕ: 22/12/2023.**

2) ವಿದ್ಯಾರ್ಥಿಗಳು ₹ 180/- ದಂಡದೊಂದಿಗೆ ಪರೀಕ್ಷಾ ಫಾರ್ಮನ್ನು ಮಹಾವಿದ್ಯಾಲಯದಿಂದ ಅಥವಾ ಕವಿವಿ ಅಂತರ್ಜಾಲದ ಮೂಲಕ (www.kud.ac.in Notification) ಪಡೆದುಕೊಂಡು, SBI Online Portal ಮೂಲಕ ಪರೀಕ್ಷಾ ಶುಲ್ಕ ಭರಿಸಿ ಮಹಾವಿದ್ಯಾಲಯಕ್ಕೆ ಪರೀಕ್ಷಾ ಫಾರ್ಮನ್ನು ಸಲ್ಲಿಸಲು ಕೊನೆಯ **ದಿನಾಂಕ: 27/12/2023.**

3) ಮಹಾವಿದ್ಯಾಲಯಗಳ ಪ್ರಾಚಾರ್ಯರು ದಂಡವಿಲ್ಲದ ಹಾಗೂ ದಂಡದೊಂದಿಗೆ ಸ್ವಿಕರಿಸಿದ ಪರೀಕ್ಷಾ ಫಾರ್ಮಗಳನ್ನು ಹಾಗೂ ಆನ್-ಲೈನ್ ಮೂಲಕ ತುಂಬಿದ ಶುಲ್ಕದ ರಶೀದಿಗಳನ್ನು ಪರಿಶೀಲಿಸಿ ಯಾದಿಗಳ ಜೊತೆಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಕೊನೆಯ **ದಿನಾಂಕ: 29/12/2023.**

| ಅ.ನಂ | ವಿವರ | ಶುಲ್ಕ ₹ |
|---|---|---|
| 01 | ಪರೀಕ್ಷಾ ಫಾರ್ಮ ಶುಲ್ಕ | 100/- |
| 02 | ಅಂಕಪಟ್ಟಿ ಶುಲ್ಕ | 145/- |
| 03 | ಪ್ರೋಜೆಕ್ಟ /ಫೀಲ್ಡ ವರ್ಕ ರಿಪೋರ್ಟ್ ಮೌಲ್ಯಮಾಪನ / ವೈವಾ ಶುಲ್ಕ (ಸಂಬಂಧಿಸಿದ ಕೋರ್ಸಗಳಿಗೆ ಮಾತ್ರ) | 535/- |
| 04 | **ಪರೀಕ್ಷಾ ಶುಲ್ಕ:** ಬಿ.ಎ/ ಬಿ.ಎಸ್‌ಸಿ/ ಬಿ.ಕಾಂ/ ಬಿ.ಎಸ್.ಡಬ್ಲ್ಯೂ/ ಬಿ.ಬಿ.ಎ/ ಬಿ.ಸಿ.ಎ/ಬಿ.ಕಾಂ(ಸಿಎಸ್) ಬಿ.ಎಸ್‌ಸಿ(ಸಿಎಸ್)/ ಬಿ.ಟಿ.ಎ/ ಬಿ.ಬಿ.ಎ(ಎಚ್&ಟಿ)/ ಬಿ.ಪಿ.ಎಡ್/ ಬಿ.ಎಡ್/ ಬಿ.ಎಫ್.ಎ/ಬಿ.ಮ್ಯೂಜಿಕ್ ಇತರೆ 1, 3 ಮತ್ತು 5ನೇ ಸೆಮಿಸ್ಟರ್ (1 ವಿಷಯಕ್ಕೆ ₹1,465/-, 2 ವಿಷಯಕ್ಕೆ ₹2,930/- 3ಕ್ಕಿಂತ ಮೇಲ್ಪಟ್ಟ ವಿಷಯಗಳಿಗೆ ₹ 4,395/-) | 4,395/- |
| | **ಪರೀಕ್ಷಾ ಶುಲ್ಕ:** ಎಲ್.ಎಲ್.ಬಿ./ಬಿ.ಎ ಎಲ್.ಎಲ್.ಬಿ./ಆನರ್ಸ 1, 3, 5, 7 ಮತ್ತು 9 ನೇ ಸೆಮಿಸ್ಟರ (1 ವಿಷಯಕ್ಕೆ ₹1,465/-, 2 ವಿಷಯಕ್ಕೆ ₹ 2,930/-, 3 ವಿಷಯಕ್ಕೆ ₹ 4,395/- 4ಕ್ಕಿಂತ ಹೆಚ್ಚಿನ ವಿಷಯಗಳಿಗೆ ₹. 5,860/-) | 5,860/- |

# ಸೂಚನೆಗಳು

1) ವಿದ್ಯಾರ್ಥಿಗಳು ಪರೀಕ್ಷಾ ಫಾರ್ಮನ್ನು (Blank OMR) ಮಹಾವಿದ್ಯಾಲಯದಿಂದ ಅಥವಾ ಕವಿವಿ ಅಂತರ್ಜಾಲ (**www.kud.ac.in (Notification)**) ದಿಂದ ಪಡೆಯಬಹುದು. ಪರೀಕ್ಷಾ ಶುಲ್ಕದ ಜೊತೆಗೆ ಪ್ರತಿ ವಿದ್ಯಾರ್ಥಿಯು ₹100/–ನ್ನು ಅಂತರಜಾಲದ ಫಾರ್ಮ ನಮೂನೆ ಪ್ರಕ್ರಿಯೆ ಶುಲ್ಕ (ಪ್ರತಿ ಸೆಮಿಸ್ಟರ್‌ಗೆ) ಮತ್ತು ₹145/– ನ್ನು ಅಂಕಪಟ್ಟಿ ಶುಲ್ಕವೆಂದು ಪಾವತಿಸಬೇಕಾಗುತ್ತದೆ ಕೊನೆಯ ಸುವರ್ಣಾವಕಾಶ ಪರೀಕ್ಷೆ ಇರುವುದರಿಂದ ಪರೀಕ್ಷಾ ಶುಲ್ಕ ಭರಿಸುವುದರ ಸಲುವಾಗಿ ಯಾವುದೇ ವರ್ಗದ ವಿದ್ಯಾರ್ಥಿಗಳಿಗೆ ವಿನಾಯಿತಿ/ ರಿಯಾಯಿತಿ ಇರುವುದಿಲ್ಲ.

2) ಅಂತಿಮ ವರ್ಷದ ಪರೀಕ್ಷೆಗೆ ಫಾರ್ಮ ಸಲ್ಲಿಸುವ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿ ಶುಲ್ಕದೊಂದಿಗೆ ಉತ್ತೀರ್ಣವಾದ ಪ್ರಮಾಣ ಪತ್ರದ ಶುಲ್ಕ ₹ 195/– ಗಳನ್ನು ಪಾವತಿಸಬೇಕು. (ಈ ಹಿಂದೆ ನಿಯಮಿತ (ರೆಗ್ಯೋಲರ್) ವಿದ್ಯಾರ್ಥಿಯಾಗಿ ಪರೀಕ್ಷಾ ಅರ್ಜಿ ಸಲ್ಲಿಸುವಾಗ ಉತ್ತೀರ್ಣ ಪ್ರಮಾಣ ಪತ್ರದ ಶುಲ್ಕ ತುಂಬಿದಲ್ಲಿ ಅಂತಹ ವಿದ್ಯಾರ್ಥಿಗಳು ಮತ್ತೊಮ್ಮೆ ಭರಿಸುವ ಅವಶ್ಯಕತೆ ಇರುವದಿಲ್ಲಾ.)

3) ಅನುತ್ತೀರ್ಣಗೊಂಡ ಬಾಕಿ ಇರುವ ಸೆಮಿಸ್ಟರ್ ಪರೀಕ್ಷೆಗಳಿಗೆ ಪ್ರತ್ಯೇಕ ಪರೀಕ್ಷಾ ಫಾರ್ಮ/ಶುಲ್ಕ ತುಂಬಲು ತಿಳಿಸಲಾಗಿದೆ.

4) ಮಹಾವಿದ್ಯಾಲಯ ಸಿಬ್ಬಂದಿಯವರು ವಿದ್ಯಾರ್ಥಿಗಳಿಂದ ಸ್ವೀಕರಿಸಿದ ಪರೀಕ್ಷಾ ಶುಲ್ಕವನ್ನು ಕ್ರೋಢಿಕರಿಸಿ SBI Online Portal ಮುಖಾಂತರ ಪರೀಕ್ಷಾ ಶುಲ್ಕ ಭರಿಸುವುದು.

5) ಮಹಾವಿದ್ಯಾಲಯದ ಸಿಬ್ಬಂದಿಯವರು ವಿದ್ಯಾರ್ಥಿಗಳಿಂದ ಭರ್ತಿ ಮಾಡಲ್ಪಟ್ಟ ಪರೀಕ್ಷಾ ಫಾರ್ಮ/ಶುಲ್ಕಗಳ ವಿವರಗಳ ಜೊತೆಗೆ ದಾಖಲೆಗಳನ್ನು/ಯಾದಿಯನ್ನು ದ್ವಿ–ಪ್ರತಿಯಲ್ಲಿ ತಯಾರಿಸಿ ಒಂದು ಪ್ರತಿಯನ್ನು ಸಂಬಂಧಪಟ್ಟ ಶಾಖೆಯ ಅಧೀಕ್ಷಕರು, ಪರೀಕ್ಷಾ ವಿಭಾಗ ಇವರಿಗೆ ಹಾಗೂ ಇನ್ನೊಂದು ಪ್ರತಿಯನ್ನು ಸಿಸ್ಟಮ್ ಎನಾಲಿಸ್ಟ್, ಗಣಕಯಂತ್ರ ಕೇಂದ್ರ ಪರೀಕ್ಷಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸುವುದು.

6) ಕೊನೆಯ ದಿನಾಂಕದ ನಂತರ ಬಂದಂತಹ ಪರೀಕ್ಷಾ ಫಾರ್ಮನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಪ್ರಾಚಾರ್ಯರು ಸದರಿ ಅಧಿಸೂಚನೆಯನ್ವಯ ವಿವರಗಳನ್ನು ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ತಿಳಿಸತಕ್ಕದ್ದು ಅದರಂತೆ ಕ್ರಮಜರುಗಿಸುವುದು. ಎಲ್ಲಾ ವಿಧ್ಯಾರ್ಥಿಗಳಿಗೆ ಕೊನೆಯ ಸುವರ್ಣಾವಕಾಶವಿದ್ದು ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು ಎಲ್ಲಾ ವಿದ್ಯಾರ್ಥಿಗಳಿಗೆ ಈ ಮೂಲಕ ತಿಳಿಸಲು ಸೂಚಿಸಲಾಗಿದೆ.

7) ಪರೀಕ್ಷಾ ಕೇಂದ್ರಗಳ ವಿವರಗಳನ್ನು ಹಾಗೂ ಪರೀಕ್ಷಾ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ಕ.ವಿ.ವಿ. ಅಂತರ್ಜಾಲ (www.kud.ac.in (Notification)) ದಲ್ಲಿ ಪ್ರಕಟಿಸಲಾಗುವುದು ಹಾಗೂ ಮಹಾವಿದ್ಯಾಲಯಗಳ ಇಮೇಲ್ ವಿಳಾಸಕ್ಕೆ ಕಳಿಸಲಾಗುವುದು.

8) ವಿದ್ಯಾರ್ಥಿಗಳು ಪರೀಕ್ಷಾ ಫಾರ್ಮನ್ನು ಸಂಬಂಧಿಸಿದ ಪ್ರಾಚಾರ್ಯರ ಸಹಿಯೊಂದಿಗೆ ಮಹಾವಿದ್ಯಾಲಯಕ್ಕೆ ಸಲ್ಲಿಸುವುದು. ಒಂದು ವೇಳೆ ಸ್ಥಗಿತಗೊಂಡ/ಮುಚಲ್ಪಟಂತಹ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಮಾತ್ರ ಪರೀಕ್ಷಾ ಶುಲ್ಕವನ್ನು SBI Online Portal ಮುಖಾಂತರ ಭರಿಸಿ ನೇರವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಶಾಖೆಯಲ್ಲಿ ಪರೀಕ್ಷಾ ಫಾರ್ಮನ್ನು ಸಲ್ಲಿಸುವುದು.


ಕುಲಸಚಿವರು(ಮೌಲ್ಯಮಾಪನ)

ಗೆ,


ಕವಿವಿ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ

**ಪ್ರತಿಗಳು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:**

1) ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ಅಭಿವೃದ್ಧಿ ಅಧಿಕಾರಿಗಳು, ಅಂಕಿ ಸಂಖ್ಯೆ ವಿಭಾಗ/ ಶಿಷ್ಯವೇತನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3) ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ,/ಎಸ್‌ಸಿ/ಎಸ್‌ಟಿ/ಕೆ–1/ಓಬಿಸಿ ಘಟಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4) ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. (ಅಧಿಸೂಚನೆಯನ್ನು ಅಂತರ್ಜಾಲದಲ್ಲಿ ಪ್ರಕಟಿಸುವುದು.)
5) ಆಪ್ತಕಾರ್ಯದರ್ಶಿಗಳು, ಕುಲಪತಿಗಳು/ಕುಲಸಚಿವರು/ಕುಲಸಚಿವರು (ಮೌಲ್ಯಮಾಪನ)/ವಿತ್ತಾಧಿಕಾರಿಗಳು, ಕ ವಿ ವಿ, ಧಾರವಾಡ.
6) ಸಿಸ್ಟಮ್ ಎನಾಲಿಸ್ಟ್, ಪರೀಕ್ಷಾ ಗಣಕಯಂತ್ರ ವಿಭಾಗ, ಕ.ವಿ.ವಿ. ಧಾರವಾಡ.
7) ಉಪಕುಲಸಚಿವರು/ ಸಹಾಯಕ ಕುಲಸಚಿವರು, ಪರೀಕ್ಷಾ/ ಹಣಕಾಸು/ ವಿದ್ಯಾಮಂಡಳ ವಿಭಾಗ, ಕ ವಿ ವಿ, ಧಾರವಾಡ.
8) ಅಧೀಕ್ಷಕರು, ಹಣಕಾಸು/ ವಿದ್ಯಾಮಂಡಳ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
9) ಅಧೀಕ್ಷಕರು, ಗೌಪ್ಯ/ ಪ್ರಶ್ನೆಪತ್ರಿಕೆ/ ಬಿ.ಎ./ಬಿ.ಕಾಂ./ಬಿ.ಎಸ್.ಸಿ./ಕಾನೂನು/ಘಟಿಕೋತ್ಸವ ಪರೀಕ್ಷಾ ವಿಭಾಗ, ಕ ವಿ ವಿ, ಧಾರವಾಡ.



# KARNATAK UNIVERSITY
# DHARWAD



## EXAMINATION APPLICATION FORM

Affix Photo Here

Course/Semester:

Examination:

Name of the College/department :

College/Department Code :

Seat No :

Candidate Name :

Father Name :

Mother Name :

Category :

Medium :

Date of Birth & Age :

Gender :

**(Refer to subject code as per OMR subject codes)**

| SEMESTER | |
|---|---|
| | |
| | |
| | |
| | |
| | |
| | |
| | |
| | |
| | |

Fee Details

| Exam App Processing Fees____ | Marks Card Fees_____ | Exam Fees____ | Other Fees_____ | PC Fees____ | Fine Fees_____ | Total Fees___ |
|---|---|---|---|---|---|---|

Fee Rpt No/Challan No______________________ Fee Receipt Dt______________

Remarks :

The candidate fulfills/does not fulfill the minimum attendance (75%) requirement.

Signature of the Student:

Date :

Signature of the Principal
with college/seal